**CC** 2157/2025

# ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.

**ಸಿಸಿ ನಂಬರ್** 2157/2025

**ಸಿ ಡಬ್ಲ್ಯೂ -1**

**ಪಿ ಡಬ್ಲ್ಯೂ -1**

**ಸಾಕ್ಷಿಯ ಹೆಸರು - ವೆಂಕಟೇಶ್**
**ತಂದೆಯ ಹೆಸರು - ಕೃಷ್ಣಪ್ಪ ಚಿತ್ರಗಾರ್**
**ವಯಸ್ಸು -** 54 **ವರ್ಷಗಳು**
**ಉದ್ಯೋಗ - ಬಡಿಗ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 18-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನಾನು ನನ್ನ ಕುಟುಂಬದೊಂದಿಗೆ ಪಾರ್ವತಿ ನಗರದಲ್ಲಿರುವ ಡಿ ವಾಯ್ ಎಸ್ ಪಿ ಕಚೇರಿ ಹಿಂದೆ ವಾಸವಿರುತ್ತೇನೆ. ನನ್ನ ತಾಯಿ ಉಕ್ಕಡಕೇರಿಯಲ್ಲಿ ವಾವಿರುತ್ತಾರೆ.

ದಿಃ **13-10-2024** ರಂದು ಸಂಜೆ **4.30-5.00** ಗಂಟೆ ಸಮಯದಲ್ಲಿ ನನ್ನ ತಾಯಿ ಎಂದಿನಂತೆ ಬನ್ನಿ ಕಾಳಮ್ಮ ದೇವಸ್ಥಾನಕ್ಕೆ ಹೋದಾಗ, ನೇಕಾರ ಕಾಲೋನಿ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ದ್ವೀಚಕ್ರ ವಾಹನದಲ್ಲಿ ಬಂದು ನನ್ನ ತಾಯಿಯ ಕೊರಳಲ್ಲಿದ್ದ **2** ಎಳೆ  ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡಿರುತ್ತಾರೆ. ನನ್ನ ತಾಯಿ ಹಿಡಿದುಕೊಂಡಿದ್ದರಿಂದ **1** ಎಳೆ ಸುಮಾರು **10** ಗ್ರಾಂ ನಷ್ಟು ಬಂಗಾರವನ್ನು ಕಳ್ಳರು ಕಿತ್ತುಕೊಂಡಿರುತ್ತಾರೆ. ನನ್ನ ತಾಯಿ ಚಾಸಾ **-4** ರವರು ನನ್ನ ಮನೆಗೆ ಬಂದು ಸರ ಕಳ್ಳತನ ಆಗಿದೆ ಎಂದು ತಿಳಿಸಿದರು. ನನ್ನ ತಾಯಿ ಗಾಬರಿಗೊಂಡಿದ್ದರಿಂದ ಮತ್ತು ಅವರಿಗೆ ರಕ್ತದೊತ್ತಡ ಜಾಸ್ತಿ ಆಗಿದ್ದರಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿದೆದ. ದಿಃ **15-10-2024** ರಂದು ನಾನು ಠಾಣೆಗೆ ಹೋಗಿ

ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಸಹಿಯನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು.

ದಿಃ 16-10-2024 ರಂದು ಮಧ್ಯಾಹ್ನ 12.30 ಗಂಟೆಗೆ ಪೋಲಿಸರು ಬಂದಾಗ ನಾನು ಗುನ್ಹಾ ಸ್ಥಳವನ್ನ ತೋರಿಸಿರುತ್ತೇನೆ. ಪಂಚನಾಮೆಗೆ ಚಾಸಾ -2 ಮತ್ತು 3 ರವರು ಪಂಚರಾಗಿ ಬಂದಿದ್ದರು. ಪಂಚನಾಮೆಯನ್ನು ಮಧ್ಯಾಹ್ನ 1.00 ರಿಂದ 2.00 ಗಂಟೆಯ ವರೆಗೆ ಮಾಡಿರುತ್ತಾರೆ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಗೆ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ.

ಈಗ ನಾನು ನೋಡುತ್ತಿರುವ ಫೋಟೋದಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಫೋಟೋವನ್ನು ನಿಪಿಃ 4 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಆದ ಸ್ಥಳದ ಪೂರ್ವಕ್ಕೆ ಶ್ರೀನಿವಾಸರವರ ಮನೆ, ಪಶ್ಚಿಮಕ್ಕೆ ರಸ್ತೆ ಹಾಗೂ ರಾಘವೆಂದ್ರರವರ ಮನೆ, ಉತ್ತರಕ್ಕೆ ವಿಶ್ವನಾಥರವರ ಮನೆ ಮತ್ತು ದಕ್ಷಿಣಕ್ಕೆ ಸತ್ಯನಾರಾಯಣರವರ ಮನೆ ಈ ರೀತಿ ಚೆಕ್ಕುಬಂದಿ ಇರುತ್ತದೆ. ಪಂಚನಾಮೆಯನ್ನು ಚಾಸಾ -15 ರವರು ಟೈಪ್ ಮಾಡಿರುತ್ತಾರೆ.

## ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಬಿ ಎಂ ವಕೀಲರಿಂದಃ

ನನ್ನ ತಾಯಿ ಉಕ್ಕಡಕೇರಿಯಲ್ಲಿ ವಾಸವಿರುತ್ತಾರೆ ಎಂದು ತೋರಿಸಲು ಪೋಲಿಸರಿಗೆ ಮನೆ ದಾಖಲೆಗಳನ್ನು ನೀಡಿಲ್ಲ. ನಾನು ಡಿ.ವಾಯ್.ಎಸ್.ಪಿ ಕಚೇರಿ ಹಿಂದೆ ವಾಸವಿರುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ಪೋಲಿಸರಿಗೆ ನೀಡಿಲ್ಲ. ನಾನು 5 ನೇ ತರಗತಿ ವರೆಗೆ ಒದಿರುತ್ತೇನೆ. ದೂರನ್ನು ಹಾಲು ಮಾರುವ ವೀರಭದ್ರಪ್ಪರವರ ಕಡೆಯಿಂದ ಬರೆಸಿರುತ್ತೇನೆ. ನಾನೇ ಸದರಿಯವರಿಗೆ ಮಾಹಿತಿ ನೀಡಿದ್ದೆ. ದೂರಿನಲ್ಲಿ ಎಷ್ಟು ಉದ್ದದ ಸರ ನನ್ನ ತಾಯಿಯ ಉಳಿದಿತ್ತು ಎಂದು ಬರೆಸಿರುವುದಿಲ್ಲ. ದ್ವೀಚಕ್ರ ಮಾಹನ ಯಾವುದು ಎಂದು ಇಂದಿಗೂ ನನಗೆ ಗೊತ್ತಿಲ್ಲ ಅಂದರೆ ಸರಿ. ನನ್ನ ತಾಯಿಗೆ ಹುಷಾರಿಲ್ಲದ ಕಾರಣ 2 ದಿನ ಕಾಲ ದೂರನ್ನು ನೀಡಲು ಆಗಿಲ್ಲ ಎಂದು ಬರೆಸಿರುತ್ತೇನೆ. ಪಂಚನಾಮೆ ಬರೆಯಲು ಚಾಸಾ -15 ರವರೇ ಮಾಹಿತಿ ನೀಡಿ ಟೈಪ್ ಮಾಡಿರುತ್ತಾರೆ.

ಉಕ್ಕಡಕೇರಿಯಿಂದ ನೇಕಾರ ಕಾಲೋನಿಗೆ 3 ರಸ್ತೆಯಲ್ಲಿ ಬರಬಹುದು ಅಂದರೆ ಸರಿ. ನನ್ನ ದೂರಿನಲ್ಲಿ ನನ್ನ ತಾಯಿ ಯಾವ ರಸ್ತೆಯಲ್ಲಿ ಬರುತ್ತಿದ್ದರು ಎಂದು ಬರೆದಿಲ್ಲ ಅಂದರೆ ಸರಿ. ಗುನ್ಹಾ ಸ್ಥಳದ ಅಕ್ಕಪಕ್ಕದಲ್ಲಿ ವಾಸದ ಮನೆಗಳಿವೆ ಅಂದರೆ ಸರಿ. ನನ್ನ ಸಮಕ್ಷಮ ಅಕ್ಕಪಕ್ಕದ ಜನರ ಹೇಳಿಕೆಗಳನ್ನು ಪಡೆದಿರುತ್ತಾರೆ. ಚಾಸಾ -2 ಮತ್ತು 3 ರವರು ನನಗೆ 20 ವರ್ಷಗಳಿಂದ ಪರಿಚಯ ಇರುತ್ತಾರೆ. ಆ ದಿನ ನನ್ನ ತಾಯಿಯ ಕೊರಳಲ್ಲಿದ್ದ ಸರವನ್ನು ಯಾರು ಕಿತ್ತುಕೊಂಡು ಹೋಗಿರಲಿಲ್ಲ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಅಂದರೆ ಸರಿಯಲ್ಲ. ಪೋಲಿಸರು ಸ್ಥಳದಲ್ಲಿ ಪೋಟೋ ಮತ್ತು ನಕಾಶೆ ತೆಗೆದಿರಲಿಲ್ಲ ಅಂದರೆ ಸರಿಯಲ್ಲ. ನನ್ನ ತಾಯಿಯ ಸರ ಸಿಗತ್ತದೆ ಎಂಬ ಆಸೆಯಿಂದ ಸುಳ್ಳು ದೂರನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ.

**CC** **<u>2157/2025</u>**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.